ದಕ್ಷಿಣ ಕನ್ನಡ ಜಿಲ್ಲೆ ಹೆಚ್ಚು ಮಳೆ ಬೀಳುವ ಪ್ರದೇಶವಾಗಿದ್ದು ಈ ಪ್ರದೇಶವನ್ನು ರಾಜ್ಯದ ಹಿತ್ಕ ಬೆಳೆಯುವ ಹಾಗೂ ಬೆಂಕಿ ಹೆಚ್ಚಾಗಿ ಉದ್ಭವಿಸುವ ಪ್ರದೇಶಗಳಿಗೆ ಹೋಲಿಸಿದರೆ ಬೆಂಕಿ ಅನಾಹುತಗಳ ಸಂಖ್ಯೆ ಬಹು ಕಡಿಮೆ. ಭಾರಿ ಕೈಗಾರಿಕಾ ಕ್ಷೇತ್ರವಾದ ಕ್ಯಾಂಪ್ಕೊ ಹಾಗೂ ಇತರೆ ರಬ್ಬರ್ ಉದ್ಯಮ ಮಂಗಳೂರು ಅಗ್ನಿಶಾಮಕ ಠಾಣೆಯ ಸಹಾಯ ಪಡೆಯುವುದಲ್ಲದೆ, ನಿಯಮಾನುಸಾರ ಸ್ವಂತ ಅಗ್ನಿ ಶಾಮಕ ಉಪಕರಣಗಳನ್ನೂ ಕೂಡ ಹೊಂದಿರಬೇಕಂ.

೭. ಸ್ಟ್ಯಾಂಪ್ ಡ್ಯೂಟಿ ಮನ್ನಾ ಮಾಡುವುದಕ್ಕೆ ಸಂಬಂಧಿಸಿದ ಪ್ರಮಾಣ ಪತ್ರವನ್ನು ನೀಡುವುದನ್ನು ಮುಂದೂವರಿಸುವುದು

ಶ್ರೀ ಶಿವಶೇಖರಪ್ಪ ಗೌಡ ಶಿರವಾಳ್ (ಶಹಾಪುರ).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಸಾಲ ಪಡೆದುಕೊಳ್ಳಲು ಆಸ್ತಿಯನ್ನು ಒತ್ತೆ ಹಾಕುವ ಬಗ್ಗೆ ಸ್ಟ್ಯಾಂಪ್ ಡ್ಯೂಟಿ ಮನ್ನಾ ಮಾಡುವುದಕ್ಕೆ ಸಂಬಂಧಿಸಿದ ಪ್ರಮಾಣ ಪತ್ರವನ್ನು ಕೊಡುತ್ತಿದ್ದುದನ್ನು ೧೯೮೭ರ ಅಕ್ಟೋಬರ್‌ನಿಂದ ನಿಲ್ಲಿಸಿರುವುದಾಗಿ ತಿಳಿದು ಬಂದಿದೆ. ಇದರಿಂದ ಅನೇಕರಿಗೆ ತೊಂದರೆಯಾಗಿದೆ. ಸದರಿ ಸೌಲಭ್ಯವನ್ನು ಮುಂದುವರಿಸಿ ಜನತೆಗೆ ಸಹಾಯ ಮಾಡಬೇಕೆಂದು ಮುಖ್ಯಮಂತ್ರಿಯವರನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ರೇಷ್ಮೆ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೇ, ಇದಕ್ಕೆ ಉತ್ತರವನ್ನು ತರಿಸಿಕೊಡುತ್ತೇನೆ.

ಶ್ರೀ ಶಿವಶೇಖರಪ್ಪಗೌಡ ಶಿರವಾಳ್.—ಅಧ್ಯಕ್ಷರೇ ಇಲ್ಲಿ ಉತ್ತರ ಬಂದಿದೆ.

ಅಧ್ಯಕ್ಷರು.—ಉತ್ತರ ತರಿಸಿಕೊಡುತ್ತೇನೆಂದು ಹೇಳಿದ್ದಾರೆ ಸ್ವಾಮಿ.

ಶ್ರೀ ಶಿವಶೇಖರಪ್ಪಗೌಡ ಶಿರವಾಳ್.—ನನಗೆ ಉತ್ತರ ಬಂದಿದೆ.

೮) ಕುಂದಾಪುರ ತಾಲ್ಲೂಕಿನ ಹಳ್ಳಿಹೊಳೆ ಆಸ್ಪತ್ರೆಗೆ ವೈದ್ಯರ ನೇಮಕ

ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಅಧ್ಯಕ್ಷರೇ, ಕಾಲವೊಂದಿತ್ತು, ಜನ ೨೫ ಸಾವಿರ ಸೂಪಾಯಿ ಸಂಗ್ರಹಿಸಿ ದೇಣಿಗೆ ನೀಡಿದರೆ ಗ್ರಾಮೀಣ ಪ್ರದೇಶದಲ್ಲಿ ಪ್ರಾಥಮಿಕ ಆರೋಗ್ಯ ಘಟಕ ಸ್ಥಾಪನೆಯಾಗುತ್ತಿತ್ತು. ಆ ಯೋಜನೆಯಲ್ಲಿ ಆರೇಳು ವರ್ಷಗಳ ಹಿಂದೆ ದಕ್ಷಿಣ ಕನ್ನಡದ ಕುಂದಾಪುರ ತಾಲ್ಲೂಕಿನ ಪಶ್ಚಿಮ ಘಟ್ಟದ ಬಂಡದ ಗ್ರಾಮ ಹಳ್ಳಿಹೊಳೆಗೂ ಒಂದು ಪ್ರಾಥಮಿಕ ಆರೋಗ್ಯ ಘಟಕ ಮಂಜೂರಾಗಿತ್ತು. ಸಹಸ್ರ ಸಹಸ್ರ ಜನಕ್ಕೆ ಸಂತೋಷವಾಗಿತ್ತು. ಕಾರಣ ಹಳ್ಳಿಹೊಳೆಗೂ ಒಂದು ಆಸ್ಪತ್ರೆ ಬಂದಿತ್ತು. ಮಾನ್ಯ ಮಂತ್ರಿ ಮೊಯಿಲಿಯವರಿಂದ ಉದ್ಘಾಟನೆ ಆಗಿತ್ತು. ಪ್ರಾರಂಭದ ಕೆಲವು ಕಾಲ ಆ ಆಸ್ಪತ್ರೆಗೆ ವೈದ್ಯಾಧಿಕಾರಿಗಳ ಸೇವೆ ಇದ್ದಿತ್ತು. ಕಾಲ ಉರುಳಿತಂ, ಜನತಾ ಸರಕಾರ ಬಂದಿತ್ತು, ಡಾಕ್ಟರಿಗೆ ವರ್ಗವಾಗಿತ್ತು. ವೈದ್ಯರ ನೇಮಕಕ್ಕಾಗಿ ಮತ್ತೆ ಮತ್ತೆ ಸರಕಾರವನ್ನು ಒತ್ತಾಯಿಸಲಾಗಿತ್ತು. ಮನವಿ ನೀಡಲಾಗಿತ್ತು. ಪ್ರಶ್ನೆ ಕೇಳಲಾಗಿತ್ತು, ಆದರೂ ಸ್ಥಾನ ಖಾಲಿಯೇ ಇತ್ತು, ಪ್ರಭಾರ ಯೋಜನೆಯಿಂದ ಯಾವುದೇ ಪ್ರಯೋಜನ ಇಲ್ಲವಾಗಿತ್ತು. ಹಳ್ಳಿಹೊಳೆಯ ಜನಕ್ಕೆಲ್ಲ ಅತ್ಯಂತ ಬೇಸರ ಈವತ್ತ, ಈ ಸರಕಾರದ ಸಾಧನೆಯ ಕುರಿತಾದ ಪ್ರಕಟಣೆಗಳು, ಹೇಳಿಕೆಗಳು, ಜಾಹೀರಾತುಗಳು ಬಹಳಷ್ಟು ಬರುತ್ತಿವೆ ಮತ್ತೂ ಮತ್ತೂ, ಆದರೆ ನಮ್ಮ ಹಳ್ಳಿಯ ಆಸ್ಪತ್ರೆಗೆ ವೈದ್ಯಾಧಿಕಾರಿಗಳನ್ನು ನೇಮಿಸಲು ಇಲ್ಲವೇ ತಾಕತ್ತು. ಅಥವಾ ಎಲ್ಲಾ ಸಾಧನೆಯೂ ಇದೇ ರೀತಿ ಆದರೆ ಜನಕೆಲ್ಲಾ ಬಾರದಿರುವುದೇ ಖಂಡಿತಾ ಆಪತ್ತು. ಕಾಲವೊಂದಿತ್ತು. ಹಳ್ಳಿಹೊಳೆಗೆ ಆಸ್ಪತ್ರೆ ಬಂದಿತ್ತು. ನಾಲ್ಕೈದು ವರ್ಷ ವೈದ್ಯರೇ ಇಲ್ಲವಾಗಿತ್ತು ಎಂದು ಇತಿಹಾಸದ ಪುಟಗಳಲ್ಲಿ ದಾಖಲಾದೀತು. ಆದನ್ನು ತಪ್ಪಿಸಿ, ಜನತೆಗೆ ಸವಲತ್ತು ದೊರಕಿಸಿ ಆಸ್ಪತ್ರೆಗೆ ವೈದ್ಯರನ್ನು ತಕ್ಷಣ ನೇಮಿಸಿ ಎಂದೂ ಒತ್ತಾಯಿಸುತ್ತೇನೆ. ಮಾನ್ಯ ಆರೋಗ್ಯ ಮಂತ್ರಿಗಳ ಬಳಿ ಮತ್ತೆ ಮತ್ತೆ, ಈ ಹೊತ್ತು.

ಶ್ರೀ ಬಿ. ರಾಚಯ್ಯ (ಮಾನ್ಯ ಆರೋಗ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಕರಾವಳಿ ಮತ್ತು ಸೌತ್‌ಕೆನರಾ ಡಿಸ್ಟ್ರಿಕ್ಟ್‌ಗಳಿಗೆ ಹೊಸದಾಗಿ ಡಾಕ್ ರ್ಸ್‌ನ್ನು ಹಾಕಿದರೆ ಅವರು ಹೋಗಬೇಕಾದಕ್ಕಿಂತ ಪಂಚಿತವಾಗಿ ವರ್ಗಾವಣೆ ಮಾಡಿಕೊಂಡು ಈ ಕಡೆ ಬರುತ್ತಾರೆ. ದಯವಿಟ್ಟು ಮಾನ್ಯ ಸದಸ್ಯರಿಗೆ ಯಾರಾದರೂ ಬೇಕಾದವರು ಇದ್ದರೆ ಹೇಳಿದರೆ ಈಗಲೇ ಆರ್ಡರ್ ಮಾಡಿ ಕಳುಹಿಸಿಕೊಡುತ್ತೇನೆ.

೯) ಮಂಗಳೂರು ಮಹಾನಗರ ಪಾಲಿಕೆಗೆ ಅಭಿವೃದ್ಧಿ ಕೆಲಸಗಳಿಗಾಗಿ ಹಣವನ್ನು ಬಿಡುಗಡೆ ಮಾಡಲು ಒತ್ತಾಯ

ಶ್ರೀ ಬಿ.ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಮಂಗಳೂರು ಮಹಾನಗರ ಪಾಲಿಕೆಗೆ ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲೇ ಪ್ರಥಮ ಬಹುಮಾನ ಬಂದಿದೆ. ಅಂತಹ ನಗರಪಾಲಿಕೆಗೆ ಗ್ರಾಮಾಂತರ ಪ್ರದೇಶದ ೧೪ ಗ್ರಾಮಗಳೂ ಸೇರಿಕೊಂಡಿವೆ. ಇಡೀ ನಗರ ಪಾಲಿಕೆಯು ಅಭಿವೃದ್ಧಿಗೆ ಬಹು ಮುಖ್ಯವಾಗಿ ರಸ್ತೆಗಳ ದುರಸ್ಥಿ ಮತ್ತು ಡಾಮರು ಹಾಕುವ ಕೆಲಸ ಅತೀ ಮುಖ್ಯವಾಗಿದೆ. ಕುಡಿಯುವ ನೀರಿನ ಅಭಾವ ನೀಗಿಸುವುದು ಅತ್ಯಗತ್ಯವಾಗಿದೆ. ಆದಿಲ್ಲವೂ ಈಗ ಹಣದ ಕೊರತೆಯಿಂದ ಸ್ಥಗಿತವಾಗಿರುತ್ತದೆ. ಆಕ್ಟ್ರಾಯಿ ಬಾಬ್ತು ಸರಕಾರದಿಂದ ಈ ನಗರಪಾಲಿಕೆಗೆ ಸಲ್ಲಬೇಕಾದ ಒಂದು ಕೋಟಿ ೩೯ ಲಕ್ಷ ರೂಪಾಯಿಗಳು ಇನ್ನೂ ಸಂದಾಯವಾಗಿಲ್ಲ. ಅಭಿವೃದ್ಧಿ ಕೆಲಸಗಳಿಗಾಗಿ ಈ ಹಣವನ್ನು ಅವರು ಕೇಳುತ್ತಲೇ ಬಂದಿದ್ದಾರೆ. ಈ ಹಣವನ್ನು ಒದಗಿಸಿದರೆ ರಸ್ತೆಗಳಿಗೆ ಡಾಮರು ಕುಡಿಯುವ ನೀರಿನ ಸೌಕರ್ಯ ಇನ್ನಿತರ ಉಪಯುಕ್ತ ಅಭಿವೃದ್ಧಿಯ ಕೆಲಸಗಳನ್ನು ಮಾಡಬಹುದಾಗಿದೆ. ಈ ಬಾಕಿ ಹಣವನ್ನು ಸರಕಾರ ಶೀಘ್ರ ಕೊಡುವಂತಾಗಬೇಕು. ಈ ಕುರಿತು ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ಚಂದ್ರಶೇಖರ್ (ಮಾನ್ಯ ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ ೧,೮೬,೯೨,೧೯೫ ರೂಪಾಯಿಗಳ ಒಟ್ಟು ಪರಿಹಾರ ಹಣವಿದ್ದು ಇದರಲ್ಲಿ ೬೫,೩೦,೫೫೬ ರೂಪಾಯಿಗಳು ಬಿಡುಗಡೆ ಯಾಗಿದ್ದು ವಿದ್ಯುಚ್ಛಕ್ತಿ ಇಲಾಖೆ ಹಾಗೂ ನೀರು ಸರಬರಾಜು ಇಲಾಖೆಯವರಿಗೆ ೨೦,೨೮,೦೦೦ ರೂಪಾಯಿಗಳನ್ನು ಕೊಟ್ಟಿದ್ದೇವೆ. ಉಳಿದಂತಹ ಹಣವನ್ನು ಇಷ್ಟರಲ್ಲಿಯೇ ಬಿಡುಗಡೆ ಮಾಡಲಾಗುತ್ತದೆ.

೧೦) ಬಸವಕಲ್ಯಾಣ ತಾಲ್ಲೂಕಿನ ಮಂರಳಾದಲ್ಲಿ ಕುಮಾರಿ ಭಾಗೀರಥಿ ಎನ್ನುವ ಆರೋಗ್ಯ ಸಹಾಯಕಿ ಮರಣ ಹೊಂದಿರುವುದು.

ಶ್ರೀ ಆರ್. ವೆಂಕಟರಾಮಯ್ಯ (ಮಂಗಳಬಾಗಿಲು).—ಮಾನ್ಯ ಅಧ್ಯಕ್ಷರೇ, ಬೀದರ್ ಜಿಲ್ಲೆ ಬಸವ ಕಲ್ಯಾಣ ತಾಲ್ಲೂಕಿನ ಮರಳಾದಲ್ಲಿ ೨೦-೧೦-೮೮ರಂದು ಮರಣ ಹೊಂದಿದ ಕುಮಾರಿ ಭಾಗೀರಥಿ ಕಿರಿಯ ಆರೋಗ್ಯ ಸಹಾಯಕಿ ೧೮-೧೦-೮೮ರ ರಾತ್ರಿ ಅಶೋಕ, ಪೋಲೀಸ್ ಪೇದೆ ಮರಳಾ ಪೋಲೀಸ್ ಠಾಣೆ ಸುಭಾಷ್ ಆಸ್ಪತ್ರೆ ಸಿಪಾಯಿ ಮತ್ತು ಪಿ ಎಸ್.ಐ.ರವರ ಮಗ ಇವರೆಲ್ಲರೂ ಕೂಡಿ ಮಾನಭಂಗ ಮಾಡಿದ್ದಾರೆಂದು ವರದಿ ಇದೆ. ಮಾನಭಂಗಕ್ಕೆ ಒಳಗಾದ ಭಾಗೀರಥಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸರ್ಕಾರವು ಸಿ.ಓ ಡಿ. ತನಿಖೆ ಮಾಡುವುದಾಗಿ ಹೇಳಿಕೊಂಡಿದ್ದರು. ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ. ತಂಪಾಕೂರು ಜಿಲ್ಲೆಯ ಪದ್ಮಲತಾ ಪ್ರಕರಣ ಗುಲಬರ್ಗಾ ಜಿಲ್ಲೆಯ ಚಿತಾಪುರದಲ್ಲಿ ಎ.ಎನ್.ಎಂ. ಕೊಲೆ, ಬಳ್ಳಾರಿಯಲ್ಲಿ ಎ.ಎನ್.ಎಂ. ಕೊಲೆ ಇದನ್ನು ಪ್ರತಿಭಟಿಸಿ ಮೌನವಣಿಗೆ ಪ್ರದರ್ಶನ ಕಿರಿಯ ಆರೋಗ್ಯ ಸಹಾಯಕಿಯರು ಮಾಡಿದ್ದಾರೆ. ಅವರ ಸಂರಕ್ಷಣೆ ಇಲ್ಲದಂತಾಗಿದೆ. ಈ ಬಗ್ಗೆ ನಾನು ಮಾನ್ಯ ಮಂತ್ರಿಗಳಿಂದ ಉತ್ತರವನ್ನು ಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಸಚಿವರು).—ಮಾನ್ಯ ಅಧ್ಯಕ್ಷರೇ, ನಿಯಮ ೨೩ರಲ್ಲಿ ಯಾವುದಾದರೊಂದು ಸ್ಪೆಸಫಿಕ್ ಘಟನೆಯನ್ನು ರೆಫರ್ ಮಾಡಿ ಬರೆಯಬೇಕು. ಅದು ಬಿಟ್ಟು ಒಂದೇ ನೋಟೀಸ್‌ನಲ್ಲಿ ಎರಡು ಮೂರು ವಿಷಯಗಳನ್ನು ಪ್ರಸ್ತಾಪ ಮಾಡಿದರೆ ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಪಟ್ಟಿರುತ್ತದೆ. ಆಗ ಏನು ಮಾಡಬೇಕು ?